PW : 1

# ಪ್ರಧಾನ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ

## OS No.45/2021

ದಿನಾಂಕಃ 16.12.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

**ಪಾಟಿಸವಾಲು ಪ್ರತಿವಾದಿ ಪರ ಶ್ರೀ M.K.V. ವಕೀಲರಿಂದಃ**

ಐವಿನ್ ರೋಡ್ರಿಗಸ್ ಎಂದರೆ ನನಗೆ ಗೊತ್ತಿಲ್ಲ. ನಾನು 10 ನೇ ತರಗತಿವರೆಗೆ ಓದಿರುತ್ತೇನೆ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ನನಗೆ ಇಂಗ್ಲೀಷ್ ಓದಲು ಮತ್ತು ಬರೆಯಲು ಸ್ವಲ್ಪಸ್ವಲ್ಪ ಬರುತ್ತದೆ. ನಿಪಿ1 ಆಗುವ ಮೊದಲು ನಾನು ಪ್ರತಿವಾದಿಯ ಗಂಡನ ಬಳಿ ಚರ್ಚಿನಲ್ಲಿ ಮಾತುಕತೆ ಮಾಡಿರುತ್ತೇವೆ. ಆ ಸಮಯ ನಾನು ಮತ್ತು ಪ್ರತಿವಾದಿ ಮಾತ್ರ ಇರುತ್ತೇವೆ. ಪುತ್ತೂರಿನ ಬಸ್ ಸ್ಟ್ಯಾಂಡ್ ಬಳಿ ಇರುವ ಮಾಯಿಡೇ ಡ್ಯೂಸ್ ಚರ್ಚ್ ನಲ್ಲಿ ಮಾತನಾಡಿರುತ್ತೇವೆ. ನಾನು ಪಂಜ ಚರ್ಚ್‌ಗೆ ಸೇರಿದವನು. ನಾನು ಪುತ್ತೂರಿನ ಚರ್ಚ್ ಗೆ ಚರ್ಚ್ ಅಭಿವೃದ್ಧಿ ಮೀಟಿಂಗ್ ಗೆ ಬಂದಿದ್ದೆ. ಚರ್ಚ್ ಅಭಿವೃದ್ಧಿ ಕಮೀಟಿಯಲ್ಲಿ ನಾನು ಸಂಚಾಲಕನಾಗಿದ್ದೇನೆ. ಸದರಿ ಕಮೀಟಿಯಲ್ಲಿ ಸುಳ್ಯ, ಪುತ್ತೂರು, ಸಂಪಾಂಜೆಯ 11 ಚರ್ಚ್ ಗಳು ಬರುತ್ತವೆ.

ಪ್ರತಿವಾದಿಯನ್ನು ನಾನು ಅಗ್ರೀಮೆಂಟ್ ನ ದಿನವೇ ಮೊದಲ ಬಾರಿಗೆ ನೋಡಿರುತ್ತೇನೆ. ಅಗ್ರೀಮೆಂಟ್ ಗೆ ಮೊದಲು ವಾದಿ ಮತ್ತು ಅವರ ಹೆಂಡತಿ ಇಬ್ಬರೂ ಬಂದು ನನ್ನೊಂದಿಗೆ ಮಾತನಾಡಿರುವುದಿಲ್ಲ. ಪ್ರತಿವಾದಿ ಪ್ರತ್ಯೇಕವಾಗಿ ತನ್ನ ಜಾಗ ಮಾರಾಟಕ್ಕಿದೆ ಎಂದು ನನ್ನ ಬಳಿ ಅಗ್ರೀಮೆಂಟ್ ಗೆ ಮುಂಚೆ ಹೇಳಿರುವುದಿಲ್ಲ. ಪ್ರತಿವಾದಿ ಮತ್ತು ಅವರ ಗಂಡ ಒಟ್ಟಿಗೆ ಬಂದು ಜಾಗ ಮಾರಾಟದ ಬಗ್ಗೆ ನನಗೆ ತಿಳಿಸಿದ್ದಾರೆ ಎಂದು ನಾನು ವಾದ ಪತ್ರದಲ್ಲಿ ಹೇಳಿದ್ದರೆ ಅದು ಸುಳ್ಳು. ಐವಿನ್ ರೋಡ್ರಿಗಸ್ ರವರು ನನ್ನ ಹೆಂಡತಿಯ ಅಕ್ಕ ಎಂದರೆ ನನಗೆ ಗೊತ್ತಿಲ್ಲ. ಐವಿನ್ ರೋಡ್ರಿಗಸ್ ರವರ ಗಂಡ ಪಿಯೂಸ್ ರೋಡ್ರಿಗಸ್ ಎಂದರೆ ಜಾಗ ಖರೀದಿಸುವಾಗ

ಪರಿಚಯವಾಗಿರುತ್ತಾರೆ. ಪಿಯೂಸ್ ರೋಡ್ರಿಗಸ್ ರವರು ಕಾಸರಗೋಡಿನವರು ಎಂದು ಪ್ರತಿವಾದಿಯ ಗಂಡ ಹೇಳಿರುತ್ತಾರೆ. ಅವರ ಕುಟುಂಬದ ಬಗ್ಗೆ ನನಗೆ ಮಾಹಿತಿ ಇಲ್ಲ. ಪಿಯೂಸ್ ರೋಡ್ರಿಗಸ್ ಮತ್ತು ಅವರ ಹೆಂಡತಿಯ ಬಗ್ಗೆ ನನಗೆ ಎಲ್ಲಾ ಮಾಹಿತಿ ಇದ್ದರೂ ಸುಳ್ಳು ಹೇಳುತ್ತಿರುತ್ತೇನೆ ಎಂದರೆ ಸರಿಯಲ್ಲ. ಪಿಯೂಸ್ ರೋಡ್ರಿಗಸ್ ರವರು ನನಗೆ ಮತ್ತು ಪ್ರತಿವಾದಿಯ ಗಂಡನಿಗೆ ಇಬ್ಬರಿಗೂ ಸಂಬಂಧಿಕರಾಗಿದ್ದು, ಅವರ ಮೂಲಕವೇ ಜಾಗದ ಮಾತುಕತೆಯಾಗಿರುತ್ತದೆ ಎಂದರೆ ಸರಿಯಲ್ಲ.

ನಿಪಿ1 ನ್ನು ಪ್ರತಿವಾದಿಯ ಗಂಡ ಕೊಟ್ಟ ಅನುಭವದ ಮೇಲೆ ತಯಾರಿಸಿರುತ್ತಾರೆ, ನಾನು ಕೂಡಾ ಒಟ್ಟಿಗೆ ಇದ್ದೆ. ಅಗ್ರಿಮೆಂಟ್ ಗೆ ಸಹಿ ಹಾಕುವ ಮೊದಲು ಅದರಲ್ಲಿರುವ ಎಲ್ಲಾ ವಿಚಾರಗಳನ್ನು ವಕೀಲರು ಓದಿ ಹೇಳಿರುತ್ತಾರೆ ಮತ್ತು ನಾನು ಎಲ್ಲಾ ಅರ್ಥ ಮಾಡಿಕೊಂಡಿರುತ್ತೇನೆ. ನಿಪಿ1 ಆಗುವ ಸಮಯ ನಾನು 3 ಲಕ್ಷವನ್ನು ನೀಡಿರುತ್ತೇನೆ. ಮತ್ತೆ 2 ಲಕ್ಷವನ್ನು ಒಂದು ವಾರದ ಒಳಗೆ ಕೊಡಬೇಕಿತ್ತು, ನಾನು ದಿಃ10.02.2016 ರಂದು ನೀಡಿರುತ್ತೇನೆ. ಹಾಗೆ 2 ಲಕ್ಷ ನೀಡುವಷ್ಟರಲ್ಲಿ ಪ್ರತಿವಾದಿಗಳು ಏನು ಮಾಡಬೇಕೆಂದು ಶರತ್ತು ಇತ್ತು ಎಂದರೆ ಸಾಲ ತೀರಿಸಲು ಹಣ ಬೇಕು ಎಂದು ಹೇಳಿರುತ್ತಾರೆ, ಕೊಟ್ಟಿರುತ್ತೇನೆ. ಜಾಗದ ಮೇಲಿರುವ ಸಾಲವನ್ನು ತೀರಿಸಬೇಕೆಂದು ಸದರಿ ಅಗ್ರೀಮೆಂಟ್ ನಲ್ಲಿ ಹಣ ಕೇಳಿದ್ದರು ಎಂದು ನಮೂದಿಸಲಾಗಿದೆಯಾ ಎಂದರೆ ನಮೂದಿಸಿರುತ್ತಾರೆ. 2 ಲಕ್ಷ ಹಣವನ್ನು ನೀಡಿದ ದಿನ ಜಾಗದ ಮೂಲ ದಾಖಲೆಗಳನ್ನು ನನಗೆ ಕೊಟ್ಟಿರುವುದಿಲ್ಲ. ಸೊಸೈಟಿಯಲ್ಲಿ ಸಾಲವಿದ್ದ ವಿಚಾರ ನನಗೆ ಅಗ್ರೀಮೆಂಟ್ ಮಾಡುವ ದಿನ ತಿಳಿಯಿತು. ಸೊಸೈಟಿಯಲ್ಲಿ ಸಾಲವಿರುವುದರಿಂದ ಜಾಗ ಬೇಡ ಎಂದು ನಾನು ಹೇಳಿರುತ್ತೇನೆ. ಆದರೆ ಅವರು ಸಾಲ ತೀರಿಸಿ ಕ್ರಯ ಪತ್ರ ಮಾಡಿಕೊಡುವುದಾಗಿ ಹೇಳಿರುತ್ತಾರೆ. ಸಾಲವನ್ನು ತೀರಿಸಿದ ಬಗ್ಗೆ ರಶೀದಿಗಳನ್ನು ಹಾಜರುಮಾಡಬೇಕೆಂದು ಬರೆದಿರುವುದು ಯಾವ ಬ್ಯಾಂಕಿನದ್ದು ಎಂದರ ಲಕ್ಷ್ಮಣಾನಂದ ಸೊಸೈಟಿ ಎನ್ನುತ್ತಾರೆ. ದುಡ್ಡು ಸ್ವೀಕರಿಸಿದ ಬಗ್ಗೆ ರಶೀದಿಯಲ್ಲಿ ತೋರಿಸಿರುತ್ತಾರೆ. ಸದರಿ ರಶೀದಿಯಲ್ಲಿ ಸಾಲ

ತೀರಿಸಿದ ಬಗ್ಗೆ ಮತ್ತು ಮೂಲ ದಾಖಲಾತಿಗಳನ್ನು ಕೊಡುವ ಬಗ್ಗೆ ನಮೂದಾಗಿರುವುದಿಲ್ಲ. ಸಾಲ ತೀರಿಸದೇ ಇರುವುದರಿಂದ ಮತ್ತು ಮೂಲ ದಾಖಲಾತಿಗಳನ್ನು ಕೊಡದೇ ಇರುವುದರಿಂದ ನಾನು ಅಗ್ರೀಮೆಂಟ್ ನ್ನು ಮುಂದುವರೆಸುವುದಿಲ್ಲ ಎಂದು ಹೇಳಿರುವುದಿಲ್ಲ. ಅಗ್ರೀಮೆಂಟ್ ನ ಪ್ರಕಾರ ದಿಃ30.05.2016 ಕ್ಕೆ ದಾವಾ ಸೇಲ್ ಡೀಡ್ ನ್ನು ಬರೆದುಕೊಡಬೇಕಿತ್ತು ಎಂದರೆ ಸರಿ. Renew ಮಾಡಿರುತ್ತಾರೆ. ಅದರ ಬಗ್ಗೆ ಕೇಳಿದಾಗ ಒಂದು ತಿಂಗಳು ಟೈಮ್ ಬೇಕು ಎಂದು ಹೇಳಿರುತ್ತಾರೆ. ನಮ್ಮೊಳಗೆ ಏನೇ ಮಾತುಕತೆಯಾಗಿ ಅಗ್ರೀಮೆಂಟ್ ಗಳಾದರೂ ಕೂಡಾ ನಿಪಿ1 ರಲ್ಲಿ ತೋರಿಸುತ್ತೇವೆ ಎಂದರೆ ಸರಿ. 1 ತಿಂಗಳ ಒಳಗೆ ಮಾಡುತ್ತೇವೆ ಎಂದು ಬಾಯಿ ಮಾತಿನಲ್ಲಿ ಹೇಳಿರುತ್ತಾರೆ. ನಿಪಿ1 ರ ನಂತರ ನಾನು ನವೀನ್ ಎಸ್. ಎನ್ ವಕೀಲರನ್ನು ಸಂಪರ್ಕಿಸಿರುತ್ತೇನೆ. ಸದರಿ ವಕೀಲರು ನನ್ನ ಸ್ನೇಹಿತರ ಮುಖಾಂತರ ಪರಿಚಯವಾಗಿರುತ್ತಾರೆ. ಸುಳ್ಯದಲ್ಲಿ ಹಾಗೂ ಪುತ್ತೂರಿನಲ್ಲಿ ಬೇಕಾದಷ್ಟು ಜನ ವಕೀಲರಿದ್ದಾರೆ ಎಂದರೆ ಸರಿ. ಬೋರ್ಡ ನೋಡಿ ನಾನು ನವೀನ್ ಎಸ್. ಎನ್. ರವರ ಕಚೇರಿಗೆ ಹೋಗಿರುತ್ತೇನೆ. ನನಗೂ, ನನ್ನ ಸ್ನೇಹಿತನಿಗೂ ಬೋರ್ಡ್ ನೋಡುವುದಕ್ಕೂ ಮೊದಲು ಪರಿಚಯ ಇರಲಿಲ್ಲ. ಸದರಿ ವಕೀಲರ ಬಳಿ ಕಾಸರಗೋಡಿನ ಪಿಯೂಸ್ ರೋಡ್ರಿಗಸ್ ರವರು ನಮ್ಮನ್ನು ಕರೆದುಕೊಂಡು ಹೋಗಿದ್ದು, ಅದನ್ನು ಮರೆಮಾಚಲು ನನ್ನ ಸ್ನೇಹಿತನ ಹೆಸರನ್ನು ಹೇಳಿರುವುದಿಲ್ಲ ಎಂದರೆ ಸರಿಯಲ್ಲ.

ನಿಪಿ2 ನ್ನು ತಯಾರಿಸಲು ವಕೀಲರಿಗೆ ನಾನೇ ಅನುಭವವನ್ನು ನೀಡಿರುತ್ತೇನೆ. ಆದಷ್ಟು ಬೇಗ ಕ್ರಯ ಚೀಟಿ ಮಾಡಿಕೊಡಬೇಕೆಂದು ಕೇಳಿಕೊಂಡಿರುತ್ತೇನೆ. ಬೇರೆ ಯಾವ ವಕೀಲರನ್ನು ಸಂಪರ್ಕಿಸುವ ಬಗ್ಗೆ ಹೇಳಿರುವುದಿಲ್ಲ. ನಿಪಿ2 ರಲ್ಲಿ ಕಾಣಿಸುವ ನಾರಾಯಣ್ ಕುಮಾರ್ ವಕೀಲರು ನನಗೆ ಗೊತ್ತಿಲ್ಲ. ನಿಪಿ2 ರಲ್ಲಿ ತಿಳಿಸಿದಂತೆ ನಾರಾಯಣಕುಮಾರ್ ರವರ ಮಂಗಳೂರಿನ ಕಚೇರಿಗೆ ಹೋಗುವಂತೆ ಪ್ರತಿವಾದಿಗೆ ಸೂಚಿಸುವಂತೆ ನಾನು ನನ್ನ ವಕೀಲರಿಗೆ ಹೇಳಿರುವುದಿಲ್ಲ. ದಿಃ26.07.2016 ರಂದು ನಾನು ನಾರಾಯಣಕುಮಾರ್ ವಕೀಲರ ಕಚೇರಿಗೆ ಬೆಳಿಗ್ಗೆ 10.00 ಗಂಟೆಗೆ ಹೋದ ಬಗ್ಗೆ ನೆನಪಿಲ್ಲ. ನಾನು

ಮಂಗಳೂರಿನ ಹಲವಾರು ವಕೀಲರ ಕಚೇರಿಗೆ ಹೋಗಿರುತ್ತೇನೆ. ದಿಃ26.07.2016 ರಂದು ನಾರಾಯಣಕುವಾರ್ ರವರ ಕಚೇರಿಗೆ ಪ್ರತಿವಾದಿ ಹೋಗಿದ್ದಾರೋ, ಇಲ್ಲವೋ ಎಂದರೆ ಹೋಗಿಲ್ಲ. ಸದರಿ ವಿಚಾರವನ್ನು ನನಗೆ ನವೀಲ್ ವಕೀಲರು ಹೇಳಿರುತ್ತಾರೆ. ನಾನು ಆ ಬಗ್ಗೆ ಪ್ರತಿವಾದಿಯ ಬಳಿ ಯಾಕೆ ಹೋಗಿಲ್ಲ ಎಂದು ಕೇಳಿರುವುದಿಲ್ಲ. ನಾರಾಯಣಕುವಾರ್ ರವರ ಕಚೇರಿಗೆ ಪ್ರತಿವಾದಿ ಹೋಗಿಲ್ಲವಾದ್ದರಿಂದ ಕೂಡಲೇ ದಾವೆ ಸಲ್ಲಿಸಿ ಎಂದು ನವೀನ್ ವಕೀಲರು ಹೇಳಿರುವುದಿಲ್ಲ. ಸದರಿ ನೋಟಿಸಿನ ನಂತರ ದಾವೆ ಹಾಕಲು ಏನು ಸಮಸ್ಯೆ ಇತ್ತು ಎಂದರೆ ಪ್ರತಿವಾದಿ ಇನ್ನೆರಡು ತಿಂಗಳು ಸಮಯಾವಕಾಶ ಕೇಳಿರುತ್ತಾರೆ. ಆ 2 ತಿಂಗಳಲ್ಲಿ ಕೂಡಾ ದಾಖಲಾತಿಗಳು ತಯಾರಾಗಿಲ್ಲ ಎಂದು ಪುನಃ ಸಮಯಾವಕಾಶ ಕೇಳಿರುತ್ತಾರೆ.

ನಿಪಿ8 ನ್ನು ನಾನು ಹೇಳಿದಂತೆ ಕಾಸರಗೋಡಿನ ರಾಮ ಪಾಟಾಳಿ ವಕೀಲರು ತಯಾರಿಸಿರುತ್ತಾರೆ. ಹಾಗೆ ತಯಾರಿಸಿದ ದಿನವೇ ದೂರನ್ನು ನೀಡಿರುತ್ತೀರಾ ಎಂದರೆ 29 ಕ್ಕೆ ಕೊಟ್ಟಿರುತ್ತೇನೆ. ನಾನು ಮಾಹಿತಿ ಕೊಟ್ಟಂತೆಯೇ ವಕೀಲರು ತಯಾರಿಸಿರುತ್ತಾರೆ. ನಿಪಿ8 ರಲ್ಲಿ ಕಾಣಿಸುವ 7ನೇ ಶರತ್ತಿನಲ್ಲಿ ಪ್ರತಿವಾದಿಯ ಬಳಿ 10 ಸೆಂಟ್ಸ್ ಜಾಗ ಮಾತ್ರ ಇದ್ದು, ಅವರು ಹೇಳಿದಂತೆ 16 ಸೆಂಟ್ಸ್ ಇಲ್ಲ, ಉಳಿದ 6 ಸೆಂಟ್ಸ್ ಬೇರೆಯವರ ಬಳಿ ಇದ್ದು ಅವರು ಮನೆ ಮಾಡಿಕೊಂಡಿದ್ದಾರೆ ಎಂದು ಬರೆದಿರುವುದು ಸರಿ. ನಿಪಿ8 ನ್ನು ನೀಡುವ ಎಷ್ಟು ದಿನಕ್ಕೆ ಮೊದಲು ಜಾಗದ ಅಳತೆ ಮಾಡಿರುತ್ತೇವೆ ಎಂದರೆ ನೆನಪಿಲ್ಲ. ನೋಟಿಸಿಗೆ ಅನುಭವ ಕೊಡುವ ಮೊದಲು ಜಾಗದ ಅಳತೆಯಾಗಿರುತ್ತದೆ ಎಂದರೆ ಸಾಕ್ಷಿ ಸುಮ್ಮನಿರುತ್ತಾರೆ. ನಾನು ನ್ಯಾಯಾಲಯದಲ್ಲಿ ದಾವೆ ದಾಖಲೆ ಮಾಡುವ 8 ದಿನಕ್ಕೆ ಮೊದಲು ಅಳತೆ ಮಾಡಿಸಿರುತ್ತೇನೆ ಎಂದು ದಾವಾ ಪತ್ರ ಮತ್ತು ಮುಖ್ಯವಿಚಾರಣಾ ಪ್ರಮಾಣಪತ್ರದಲ್ಲಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಆ ವಿಚಾರವನ್ನು ನಿಪಿ8 ರಲ್ಲಿ ಪ್ರತಿವಾದಿಯ ಗಂಡನಲ್ಲಿ ವಿಚಾರಿಸಿಕೊಂಡು ವಕೀಲರು ಬರೆದಿರಬಹುದು. ಸದರಿ ವಕೀಲರಿಗೆ ಪ್ರತಿವಾದಿಯ ಗಂಡನ ಪರಿಚಯವಿದೆಯೇ ಎಂದರೆ ಪೋನ್ ಮಾಡಿರಬಹುದು ಎನ್ನುತ್ತಾರೆ. ನಾನು ಅನುಭವ ಕೊಟ್ಟಂತೆ ಅದೇ ದಿನ

ದೂರನ್ನು ನನ್ನ ಕೈಗೆ ಕೊಟ್ಟಿರುತ್ತಾರೆ. ನನ್ನ ಸಮಕ್ಷಮ ಪ್ರತಿವಾದಿಯ ಗಂಡನಿಗೆ ಫೋನ್ ಮಾಡಿರಬಹುದು, ಅವರು ನನಗೆ ತಿಳಿಸಿಲ್ಲ. ಸದರಿ ವಕೀಲರಿಗೆ ಪ್ರತಿವಾದಿಯ ಗಂಡನ ಪರಿಚಯ ಇರುವ ಬಗ್ಗೆ ನನಗೆ ಗೊತ್ತಿಲ್ಲ. ಪ್ರತಿವಾದಿಯ ಗಂಡನ ಫೋನ್ ನಂಬರ್ ನ್ನು ವಕೀಲರಿಗೆ ಯಾರು ನೀಡಿದ್ದು ಎಂದು ನನಗೆ ಗೊತ್ತಿಲ್ಲ. ಅಲ್ಲಿ ಜಾಗ ಅಳತೆ ಮಾಡುವಾಗ 16 ಸೆಂಟ್ಸ್ ಇಲ್ಲ, 10 ಸೆಂಟ್ಸ್ ಇದೆ, ಜಾಗ ಬೇಡ, ಅಡ್ವಾನ್ಸ್ ವಾಪಸ್ ಕೊಡಿ ಎಂದು ನಾನು ನಿಪಿ8 ರಲ್ಲಿ ಬರೆಸಿದ್ದೇನಾ ಎಂದರೆ ನೆನಪಿಲ್ಲ ಎನ್ನುತ್ತಾರೆ. ನಿಪಿ8 ನ್ನು ಬೇಗ ಕ್ರಯ ಚೀಟಿ ಮಾಡಿಕೊಡಲಿ ಎಂದು ಕೊಟ್ಟಿರುತ್ತೇನೆ. ಸುರತ್ಕಲ್ ಪೋಲೀಸ್ ಠಾಣೆಗೆ ಕಳುಹಿಸಿರುತ್ತಾರೆ ಎಂದರೆ ಸರಿ. ಅಲ್ಲಿ ಪೋಲೀಸರು ಠಾಣೆಗೆ ಪ್ರತಿವಾದಿ ಮತ್ತು ಗಂಡನನ್ನು ಕರೆಸಿರುತ್ತಾರೆ ಎಂದರೆ ಸರಿ. ನನ್ನ ಸಮಕ್ಷಮ ಅವರ ವಿಚಾರಣೆಯಾಗಿಲ್ಲ ಮತ್ತು ಅವರು ಯಾವುದೇ ಹೇಳಿಕೆ ನೀಡಿರುವುದಿಲ್ಲ. ನಿಪಿ8 ರಿಂದ 11 ನ್ನು ನಾನು ಸುರತ್ಕಲ್ ಠಾಣೆಯಲ್ಲಿ ಪಡೆದಿರುತ್ತೇನೆ. ಸದರಿ ದಾಖಲೆಗಳಲ್ಲಿ ಕೆಲವನ್ನು ಅರ್ಥ ಮಾಡಿಕೊಂಡಿರುತ್ತೇನೆ. ಅವುಗಳಲ್ಲಿ ಯಾವ ಯಾವ ವಿಷಯಗಳು ನನಗೆ ಅರ್ಥವಾಗಲಿಲ್ಲ ಎಂದರೆ 9 ವರ್ಷವಾಗಿರುವುದರಿಂದ ನೆನಪಿಲ್ಲ. ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಧನೆ ಮಾಡುತ್ತಿರುವುದರಿಂದ ಮರೆತುಹೋಗಿದೆ ಎಂದು ಸುಳ್ಳು ಸಾಧನೆ ಮಾಡುತ್ತಿರುತ್ತೇನೆ ಎಂದರೆ ಸರಿಯಲ್ಲ.

ನಿಪಿ10 ರಂತೆ ಸುರತ್ಕಲ್ ಠಾಣೆಯವರು ಕಮೀಷನರ್ ಗೆ ರಿಪೋರ್ಟ ನೀಡಿರುತ್ತಾರೆ ಎಂದರೆ ಸರಿ. ನಿಪಿ10 ರಲ್ಲಿ ಬರೆದ ವಿಷಯಗಳಾ ಸರಿ ಇವೆಯಾ ಎಂದರೆ ನೆನಪಿಲ್ಲ. ನಿಪಿ10 ನ್ನು ಸಾಕ್ಷಿಗೆ ಓದಿ ಹೇಳಲಾಗಿ ಅದರಲ್ಲಿರುವ ಎಲ್ಲಾ ವಿಷಯಗಳು ಸರಿ ಇಲ್ಲ ಎನ್ನುತ್ತಾರೆ. ನಿಪಿ10 ರಲ್ಲಿರುವ ಎಲ್ಲಾ ವಿಷಯಗಳು ಸರಿ ಇವೆ. 5 ಲಕ್ಷ ಮುಂಗಡ ಹಣವನ್ನು ಹಿಂತಿರುಗಿಸುವಂತೆ ಯಾವಾಗ ಕೇಳಿರುತ್ತೇನೆ ಎಂದರೆ ದೂರು ಕೊಡುವುದಕ್ಕೆ ಒಂದು ವಾರ ಮುಂಚೆ ಕೇಳಿದ್ದೆ. ನನಗೆ ಜಾಗ ಖರೀದಿಸಲು ಆಸಕ್ತಿ ಇಲ್ಲದ ಕಾರಣ ನಾನು ಮುಂಗಡ ಹಣವನ್ನು ವಾಪಸ್ಸು ಕೇಳಿರುತ್ತೇನೆ ಎಂದರೆ ಅವರು ಮೋಸ ಮಾಡಿದ್ದಾರೆ ಎಂದು ನಾನು ಹಣ ವಾಪಸ್ಸು ಕೇಳಿರುತ್ತೇನೆ.

ಪ್ರತಿವಾದಿ ಮತ್ತು ಅವರ ಗಂಡ ಮೋಸ ಮಾಡಿದ್ದಾರೆ ಎಂದು ಹೇಳುವ ವಿಚಾರ ನನಗೆ ನಿಪಿ8 ನ್ನು ನೀಡುವ ಮೊದಲೇ ಗೊತ್ತಾಗಿರುತ್ತದೆ ಎಂದರೆ ಅಳತೆ ಮಾಡಿದಾಗ ಗೊತ್ತಾಗಿರುತ್ತದೆ. ಅಳತೆಯನ್ನು ಯಾವಾಗ ಮಾಡಿದ್ದು ಎಂದರೆ ರಾಮ ಪಾಟಾಳಿ ವಕೀಲರು ಮತ್ತು ಪ್ರತಿವಾದಿ ಮಾತನಾಡಿಕೊಂಡ ನಂತರ ಗೊತ್ತಾಯಿತು. ನನ್ನ ಅನುಭವವನ್ನು ಬಿಟ್ಟು ಪ್ರತಿವಾದಿಯ ಗಂಡನ ಅನುಭವವನ್ನು ಕೇಳಿ ದೂರು ತಯಾರಿಸುತ್ತಾರೆಯೇ ಎಂದರೆ ಇಲ್ಲ ಎಂದು ಹೇಳಿ, ನಂತರ ಒಂದು ಪ್ಯಾರಾ ಮಾತ್ರ ಬರೆದಿರುತ್ತಾರೆ ಎನ್ನುತ್ತಾರೆ. ಕಾಸರಗೋಡು ಜಿಲ್ಲೆ/ತಾಲೂಕು ವಿದ್ಯಾನಗರದಲ್ಲಿ ಅವರ ಕಚೇರಿ ಇದೆ. ಅವರನ್ನು ನ್ಯಾಯಾಲಯಕ್ಕೆ ಕರೆಸಿ ಸಾಕ್ಷಿ ವಿಚಾರಣೆ ಮಾಡುತ್ತೀರಾ ಎಂದರೆ ನ್ಯಾಯಾಲಯ ಕೇಳಿದರೆ ಮಾಡುತ್ತೇನೆ. ರಾಮ ಪಾಟಾಳಿ ಎಂಬ ವಕೀಲರೇ ವಿದ್ಯಾನಗರದಲ್ಲಿ ಇಲ್ಲ, ನಾನು ಹೇಳಿದಂತೆ ಅವರು ನಿಪಿ8 ನ್ನು ತಯಾರಿಸಿರುವುದಿಲ್ಲ, ಆಗ ಪ್ರತಿವಾದಿಯ ಗಂಡನಿಗೆ ಪೋನ್ ಕೂಡಾ ಮಾಡಿರುವುದಿಲ್ಲ, ಸುಳ್ಳು ಸಾಧನೆ ಮಾಡುತ್ತಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯ ಗಂಡನಾಗಲೀ ಪ್ರತಿವಾದಿಯಾಗಲೀ ಮುಂಗಡ ಹಣವನ್ನು ಕೊಡುವುದಿಲ್ಲ, ಕ್ರಯ ಚೀಟಿಯನ್ನು ಮಾಡಿಸಿರುವುದಿಲ್ಲ, ನನ್ನ ವಿಶ್ವಾಸಕ್ಕೆ ಭಂಗ ತಂದಿದ್ದಾರೆ ಎಂಬ ಉದ್ದೇಶದಿಂದ ನಾನು ಪೋಲೀಸರಿಗೆ ದೂರನ್ನು ನೀಡಿರುತ್ತೇನೆ.

ನಿಪಿ9 ನ್ನು ಓದಿ ನೋಡಿರುತ್ತೇನೆ. ನಿಪಿ9 ರಂತೆ ಪೋಲೀಸರು ಸಿವಿಲ್ ನ್ಯಾಯಾಲಯದಲ್ಲಿ ದಾವೆ ದಾಖಲು ಮಾಡಿ ಎಂದು ಹೇಳಿದ ನಂತರ 2017 ರಲ್ಲಿ ನಾನು ದಾವೆ ದಾಖಲಿಸಿರುವುದಿಲ್ಲ ಯಾಕೆಂದರೆ ಪ್ರತಿವಾದಿ ನನಗೆ ಹಣ ಕೊಡುತ್ತೇನೆ ಎಂದು ಹೇಳಿರುತ್ತಾರೆ. ಆ ವಿಚಾರವನ್ನು ಅಗ್ರೀಮೆಂಟ್ ನಲ್ಲಿ ಬರೆಯಲು ಆಕ್ಷೇಪವಿತ್ತಾ ಎಂದರೆ ಅವರು ಕೊಡುತ್ತೇನೆ ಎಂದು ಹೇಳಿದ್ದನ್ನು ನಾನು ನಂಬಿದ್ದೆ ಎನ್ನುತ್ತಾರೆ. 16 ಸೆಂಟ್ಸ್ ಜಾಗದಲ್ಲಿ 10 ಸೆಂಟ್ಸ್ ಮಾತ್ರವಿದ್ದು, ಸದರಿ 10 ಸೆಂಟ್ಸ್‌ನ್ನು ಮಾತ್ರ ಮಾರಾಟ ಮಾಡಿ ಎಂದು ಕೇಳಿರುತ್ತೇನೆ ಆಗ 30 ಲಕ್ಷ ಸಾಲ ಇದೆ ಎಂದು ಹೇಳಿರುತ್ತಾರೆ. ಆ ರೀತಿ ನಾನು ಅವರ ಬ್ಯಾಂಕಿಗೆ ಹೋಗಿ ಕೇಳಿರುತ್ತೇನೆ. ಆ

ರೀತಿ ನಾನು ಬರಹದ ಮೂಲಕ ಕೇಳಿರುವುದಿಲ್ಲ. ನಾನಾಗಿಯೇ ಸದರಿ ವಿಚಾರವಾಗಿ ನೋಟೀಸು ನೀಡಿರುವುದಿಲ್ಲ. 10 ಸೆಂಟ್ಸ್ ಜಾಗವನ್ನು ಖರೀದಿಸುತ್ತೇನೆ ಎಂದು ಯಾವುದೇ ನೋಟೀಸು ನೀಡಿರುವುದಿಲ್ಲ. ಸದರಿ ವಿಚಾರವನ್ನು ನಿಪಿ1 ರಲ್ಲಿ ನಮೂದಿಸಲು ನಾನು ಪ್ರಯತ್ನಿಸಿರುತ್ತೇನೆ. ಯಾವಾಗ ಎಂದು ನೆನಪಿಲ್ಲ. 10 ಸೆಂಟ್ಸ್ ಜಾಗವನ್ನು ಸಾಲ ಕ್ಲೀಯರ್ ಮಾಡಿದರೆ ಖರೀದಿಸಲು ನಾನು ತಯಾರಿದ್ದೇನೆ. ಹಾಗೆ ನಾನು ತಯಾರಿದ್ದೇನೆ ಎಂದು ದಾವೆ ದಾಖಲು ಮಾಡಲು ಆಕ್ಷೇಪವಿರಲಿಲ್ಲ. ಮುಂಗಡ ಹಣವನ್ನು ಮಾತ್ರ ಕೇಳಲು ಏನು ಕಾರಣ ಎಂದರೆ ಮೊದಲಿಗೆ 16 ಸೆಂಟ್ಸ್ ಎಂದು ಹೇಳಿ, ನಂತರ 10 ಸೆಂಟ್ಸ್ ಎಂದು ಹೇಳಿ, ನಂತರ ಸಾಲ ಇದೆ ಎಂದು ಹೇಳಿ ನನಗೆ ಮೋಸ ಮಾಡಿರುತ್ತಾರೆ. ನಿಪಿ1 ರ 8ನೇ ಕಂಡಿಕೆಯನ್ನು ಯಾಕೆ ಬರೆಯುತ್ತಿದ್ದೀರಿ ಎಂದು ಪ್ರತಿವಾದಿಯ ಗಂಡನಲ್ಲಾಗಲೀ, ವಕೀಲರಲ್ಲಾಗಲೀ ಕೇಳಿರುತ್ತೀರಾ ಎಂದರೆ ಕೇಳಲಾಗುವುದಿಲ್ಲ ಎನ್ನುತ್ತಾರೆ. ಅಲ್ಲಿ 10 ಸೆಂಟ್ಸ್ ಜಾಗ ಮಾತ್ರ ಇದ್ದು, ಅದನ್ನು ಮಾತ್ರ ಕ್ರಯ ಚೀಟಿ ಮಾಡಲು ನಿಪಿ5 ರಲ್ಲಿ ಕೇಳಿಕೊಂಡಿರುವುದಿಲ್ಲ. ಪ್ರಾರಂಭದ ದಿನದಿಂದಲೇ ಜಾಗ ಬೇಡವಾಗಿದ್ದರಿಂದ ಮುಂಗಡ ಹಣವನ್ನು ಹಿಂದೆ ಕೊಡಿ ನನಗೆ ಜಾಗ ಬೇಡ ಎಂದು ಪ್ರತಿವಾದಿ ಜಾಗ ಕೊಡಲು ತಯಾರಿದ್ದರೂ ಕೂಡಾ ನಾನು ಮುಂಗಡ ಹಣವನ್ನು ಮಾತ್ರ ವಾಪಸ್ಸು ಪಡೆಯಲು ಕೇಳಿರುತ್ತೇನೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಯಾವುದೇ ಜಾಗವನ್ನು ಖರೀದಿಸುವಾಗ ಕನ್ವರ್ಸನ್ ಆಗಿರಬೇಕು ಮತ್ತು ಸಿಂಗಲ್ ಸೈಟ್ ಆಗಿರಬೇಕು ಎಂದರೆ ನನಗೆ ಆಗ ಗೊತ್ತಿರಲಿಲ್ಲ ಎನ್ನುತ್ತಾರೆ. 10 ಸೆಂಟ್ಸ್‌ನ್ನು ಪ್ರತಿವಾದಿ ಕನ್ವರ್ಸನ್ ಮಾಡಿಸಿ, ಸಿಂಗಲ್ ಸೈಟ್ ಮಾಡಿಸಿರುತ್ತಾರೆ ಎಂದರೆ ಗೊತ್ತಿಲ್ಲ. ಅದೇ ರೀತಿ ಉಳಿದ 6 ಸೆಂಟ್ಸ್ ಜಾಗವನ್ನು ಪ್ರತಿವಾದಿ ಕನ್ವರ್ಸನ್ ಮಾಡಿಸಿ, ಸಿಂಗಲ್ ಸೈಟ್ ಮಾಡಿಸಿರುತ್ತಾರೆ ಎಂದರೆ ಗೊತ್ತಿಲ್ಲ. ಸದರಿ ವಿಚಾರವನ್ನು ಸುರತ್ಕಲ್ ಠಾಣೆಯಲ್ಲಿ ಕೂಡಾ ಹೇಳಿರುತ್ತಾರೆ ಎಂದರೆ ದಾಖಲೆ ಕೊಟ್ಟಿರುವುದಿಲ್ಲ ಹೇಳಿರುತ್ತಾರೆ ಎನ್ನುತ್ತಾರೆ. ಪೋಲೀಸರು ದಾಖಲೆ ತರುವಂತೆ ಪ್ರತಿವಾದಿಯವರ ಬಳಿ ಹೇಳಿದ ಬಗ್ಗೆ ನನಗೆ ಗೊತ್ತಿಲ್ಲ. ನಾನು ಕೊಟ್ಟ 5

PW : 1

ಲಕ್ಷ ಹಣವನ್ನು ಸಾಲವನ್ನೂ ಕಟ್ಟಿ ಉಳಿದ ಹಣವನ್ನು ಕನ್ವರ್ಸನ್ ಮಾಡಿಸಲು ಮತ್ತು ಸಿಂಗಲ್ ಸೈಟ್ ಮಾಡಿಸಲು ಉಪಯೋಗಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಚಾರವನ್ನು ಪೋಲೀಸರಿಗೂ ಪ್ರತಿವಾದಿಯವರು ತಿಳಿಸಿರುತ್ತಾರೆ ಎಂದರೆ ಹೇಳಿಕೆ ನೀಡಿರುತ್ತಾರೆ. ಹೇಳಿಕೆ ನೀಡಿದ್ದರಿಂದ ಪೋಲೀಸರು ಪ್ರತಿವಾದಿಗೆ ಯಾವುದೇ ಮೋಸ ಮಾಡುವ ಉದ್ದೇಶವಿಲ್ಲ ಎಂದು ನನ್ನ ದೂರನ್ನು ಮುಕ್ತಾಯ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ನಾನು ಪ್ರತಿವಾದಿಯ ವಿರುದ್ಧ ಯಾವುದೇ ಖಾಸಗಿ ಪಿರ್ಯಾದನ್ನು ಸಲ್ಲಿಸಿರುವುದಿಲ್ಲ. ಪ್ರತಿವಾದಿ ಹಣ ಕೊಡುತ್ತೇನೆ ಎಂದು ಹೇಳಿದ್ದರಿಂದ ನಾನು ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ. ಸಿವಿಲ್ ಪ್ರಕರಣವಾದ ಕಾರಣ, ಅವರು ಯಾವುದೇ ಮೋಸ ಮಾಡಿಲ್ಲ ಎಂಬುದು ನನಗೆ ಮನದಟ್ಟಾದ ಕಾರಣ ನಾನು ಖಾಸಗಿ ಪಿರ್ಯಾದನ್ನು ಸಲ್ಲಿಸಿರುವುದಿಲ್ಲ ಎಂದರೆ ನಾನು ದಾವೆ ಹೂಡಿರುತ್ತೇನೆ.

**ಮುಂದುವರೆದ ಪಾಟೀಸವಾಲಿಗೆ ಮುಂದೂಡಲಾಯಿತು.**

ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ. ಇದೆ

ಪ್ರಧಾನ ಹಿರಿಯ ವ್ಯವಹಾರಿಕ ನ್ಯಾಯಾಧೀಶರು, ಪುತ್ತೂರು